ಓ ಎಸ್ ನಂ.70/2023

ಪಿ.ಡಬ್ಲ್ಯೂ-1 ಔರಂಗಜೇಬ ತಂದೆ ಮೌಲಾಸಾಬ

**(ಇಂದು ದಿನಾಂಕಃ 09-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಕೆ ಜಿ ಪಿ ವಕೀಲರಿಂದ.

ದಾವಾ ಆಸ್ತಿಯ ಚೆಕ್ಕುಬಂದಿಗಳು ನನಗೆ ಗೊತ್ತು. ಪೂರ್ವಕ್ಕೆ 5-1-911 ಮನೆ ಇರುತ್ತದೆ. ಪಶ್ಚಿಮಕ್ಕೆ ಸರಕಾರಿ ರಸ್ತೆ ಇದೆ. ಉತ್ತರಕ್ಕೆ 5-1-903 ಮನೆ ಇರುತ್ತದೆ ಮತ್ತು ದಕ್ಷಿಣಕ್ಕೆ 5-1-901 ಮನೆ ಇರುತ್ತದೆ. ನಾನು ಟಿ ಸಿ ಹೆಚ್ ಓದಿರುತ್ತೇನೆ. ನಾನು 01-04-2004 ರಿಂದ 01-04-2006 ರವರೆಗೆ ಸಂಜೀವಿನಿ ಪ್ರೌಢ ಶಾಲೆ ಕಲಬುರಗಿಯಲ್ಲಿ ಅಟೆಂಡರ ಆಗಿ ಸೇವೆ ಸಲ್ಲಿಸಿರುತ್ತೇನೆ. 2006 ರಿಂದ 31-03-2008 ರವರೆಗೆ ರಾಯಲ್ ಪಬ್ಲಿಕ ಶಾಲೆಯಲ್ಲಿ ಅಫಜಲಪೂರದಲ್ಲಿ ಮುಖ್ಯೋಪಾಧ್ಯಯನಾಗಿ ಕೆಲಸ ಮಾಡಿರುತ್ತೆನೆ. ಆರೀತಿ ಕೆಲಸ ಮಾಡಿದ ಬಗ್ಗೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ನನ್ನ ತಂದೆ ಸರಕಾರಿ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಅಫಜಲಪೂರದಲ್ಲಿ ನನ್ನ ಹೆಸರಿನಲ್ಲಿ ಪ್ಲಾಟ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಖರೀದಿಸಿರುತ್ತೇನೆ ಎನ್ನುತ್ತಾರೆ. ನಾನು ಹೇಳಿದಂತೆ ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ದಾವಾ ಆಸ್ತಿಯನ್ನು ಖರೀದಿಸಲು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

2. ನಮ್ಮ ತಂದೆಯೇ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಮತ್ತು ದಾವಾ ಆಸ್ತಿ ಖರೀದಿಯ ಮೊದಲು ನಮ್ಮ ತಂದೆಯೇ ಮುಂಗಡ ಪಾವತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಮೂವತ್ತಾರು ಸಾವಿರ ರೂಪಾಯಿ ಬೆಲೆ ನಮೂದಿಸಲಾಗಿರುತ್ತದೆ. ನಾನು ಕೆಲಸ ಮಾಡುತ್ತಿದ್ದ ಬಗ್ಗೆ ತೋರಿಸಲು ದಾಖಲೆಗಳನ್ನು

ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ತಂದೆ ಖರೀದಿಸಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ನಮ್ಮ ತಂದೆಯ ಜೊತೆಗೆ ಒಟ್ಟಿಗೆ ಇರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಿ ನಾನು ನನ್ನ ತಂದೆ ಮತ್ತು ನನ್ನ ಸಹೋದರ ಒಟ್ಟಿಗೆ ಇರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆಯನ್ನು ನಮ್ಮ ತಂದೆಯೇ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಆದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.